# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:ARWSP:ಆಂಮ:ವಿವ3:2007-08 ದಿನಾಂಕ: 22-01-2008

## ಆದೇಶ.

**ವಿಷಯ** : 2006-07 ನೇ ಸಾಲಿನ ARWSP/DDP ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ:** ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08 /3359&3360, ದಿನಾಂಕ:10-1-2008.

ಉಲ್ಲೇಖಿತ ಪತ್ರದ ಮೂಲಕ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು 2006-07 ನೇ ಸಾಲಿನಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಗೋನ್ವಾಟ್ಲ ತಾಂಡಾ ಮತ್ತು ನೀರಮಾನವಿ ಕ್ಯಾಂಪ ಗ್ರಾಮಗಳ ಕುಡಿಯುವ ನೀರು ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಸಲ್ಲಿಸಿ ಆಡಳಿತಾತ್ಮಕ ಮಂಜೂರಾತಿ ಕೋರಿರುತ್ತಾರೆ.

ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಲಾಗಿ ಸದ್ರಿ ಕಾಮಗಾರಿಗಳು 2006-07 ನೇ ಸಾಲಿನ ARWSP/DDP ಕ್ರಿಯಾ ಯೋಜನೆಯಲ್ಲಿ ಸೇರಿ ಅನುಮೋದನೆಯಾಗಿರುತ್ತವೆ. ಇದಲ್ಲದೆ ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸದರಿ ಕಾಮಗಾರಿಗಳನ್ನು ಇದುವರೆಗೆ ಪ್ರಾರಂಭಿಸಿಲ್ಲ ಎಂದು ದೃಢೀಕರಿಸಿರುವುದರಿಂದ ಆದ್ದರಿಂದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷ ದಲ್ಲಿ) | ಕ್ರಿ.ಯೋ. ಯಲ್ಲಿನ ಪುಟ ಸಂ. ಹಾಗೂ | ಯೋಜನೆ |
|---|---|---|---|---|
| 1 | ಮಾನವಿ ತಲ್ಲೂಕು, ನೀರಮಾನವಿ ಕ್ಯಾಂಪ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ. ( 2000 ಮೀಟರ ಪೈಪ ಲೈನ, ಪಂಪಿಂಗ ಮಷಿನರಿ,ಪಂಪ ಹೌಸ, ಕೊಳವೆ ಭಾವಿ ಹಾಗೂ 1-ಸಿಸ್ಟರ್ನ್ ಒದಗಿಸುವುದು) | 4.35 | 3/5 | 06-07 ARWSP |
| 2 | ಲಿಂಗಸೂಗುರು ತಾಲ್ಲೂಕು, ಗೋನ್ವಾಟ್ಲ ತಾಂಡಾ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ. ( 890 ಮೀಟರ ಪೈಪ ಲೈನ, ಪಂಪಿಂಗ ಮಷಿನರಿ, ಕೊಳವೆ ಭಾವಿ, 1-ಸಿಸ್ಟರ್ನ್ ಹಾಗೂ 4- ಸ್ಟ್ಯಾಂಡ ಪೊಸ್ಟ ಒದಗಿಸುವುದು) | 3.00 | 6/1 | 06-07 DDP |

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ

ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.

4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ಕಾಮಗಾರಿಯನ್ನು ಲಬ್ಯ ಅನುದಾನ ಪರಿಗಣಿಸಿ ಅನುಷ್ಠಾನಗೊಳಿಸುವುದು ಹಾಗೂ ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಪಂಚಾಯತ ರಾಜ್ ಇಂಜಿನೀಯರಿಂಗ ಉಪವಿಭಾಗ ಲಿಂಗಸೂಗುರು/ ಮಾನವಿ
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಲಿಂಗಸೂಗುರು/ ಮಾನವಿ.
6. ಅದ್ಯಕ್ಷರು / ಕಾರ್ಯದರ್ಶಿಗಳು ಗುಂತುಗೋಳ/ನೀರಮಾನ್ವಿ ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಡೀಕರಿಸುವುದು.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.